# ಸಾಮ್ರಾಣಿ ಕಲ್ಲು

ಆಗ ಸಂಜೆಯಾದರೆ ಸಾಕು, ಬಲಶಾಲಿಗಳು ಊರಿನ ಗುಡಿಯ ಮುಂದಿರುವ ಸಾಮ್ರಾಣಿ ಕಲ್ಲುಗಳನ್ನು ಒಂದೇ ಕೈಯಿಂದ ಎತ್ತಿ ತಮ್ಮ ಬಲವನ್ನು ಪ್ರದರ್ಶಿಸುತ್ತಿದ್ದರು. ಆದರೆ ಈಗ ಅಂತಹ ಸಾಹಸಿಗಳಿಲ್ಲದೇ ಈ ಕಲ್ಲುಗಳು ನೇಪಥ್ಯಕ್ಕೆ ಸರಿದಿವೆ. ಕೆಲವು ಕಲ್ಲುಗಳು ಯಾರದ್ದೋ ಮನೆಯ ಮೆಟ್ಟಿಲಾಗಿವೆ. ಅಂತಹ ಶಕ್ತಿಶಾಲಿಗಳೂ ಈಗ ಇಲ್ಲ.

**-ಡಾ. ಮಲ್ಲಿಕಾರ್ಜುನ ಕುಂಬಾರ,**
**ಗದಗ**





# ಕೋನಾರ್ಕದ ಕಬ್ಬಿಣದ ತೊಲೆಗಳು

ವಿಶ್ವ ಪರಂಪರೆಯ ಪಟ್ಟಿಯಲ್ಲಿರುವ ಒಡಿಶಾದ ಕೋನಾರ್ಕದ ಸೂರ್ಯದೇವಾಲಯದ ಆವರಣದಲ್ಲಿ, ಹುಲ್ಲು ಹಾಸಿನ ಮಧ್ಯೆ ಸುಮಾರು ಮೂವತ್ತಕ್ಕಿಂತ ಹೆಚ್ಚು ಕಬ್ಬಿಣದ ತೊಲೆಗಳನ್ನು ಜೋಡಿಸಿ ಇಟ್ಟಿದ್ದಾರೆ. ಸಮುದ್ರ ತೀರದಲ್ಲಿರುವ ಕೋನಾರ್ಕದಲ್ಲಿ, ಸುಮಾರು ನೂರಿನ್ನೂರು ವರ್ಷಗಳಿಂದ ಆ ಕಬ್ಬಿಣದ ತೊಲೆಗಳು ಗಾಳಿಗೆ ತೆರೆದುಕೊಂಡಿದ್ದರೂ, ಇಂದಿಗೂ ತುಕ್ಕು ಹಿಡಿಯದೇ ಗಟ್ಟಿ ಮುಟ್ಟಾಗಿವೆ. ಕರ್ನಾಟಕದ ಗಂಗ ರಾಜರ ಸಂಬಂಧಿಗಳಾದ ಪೂರ್ವದ ಗಂಗ ರಾಜವಂಶದ ನರಸಿಂಹದೇವನು ಹದಿಮೂರನೆಯ ಶತಮಾನದಲ್ಲಿ ಕಟ್ಟಿದ ಸೂರ್ಯದೇವಾಲಯದ ನಿರ್ಮಾಣಕ್ಕೆ ಉಪಯೋಗಿಸಿದ ಕಬ್ಬಿಣದ ಕಂಬಗಳು ಅವು. ದೇಗುಲದ ಮುಖ್ಯ ಗೋಪುರವು ಬಿದ್ದು ಹೋದನಂತರ, ದೊರಕಿದ ಆ ಕಬ್ಬಿಣದ ಕಂಬಗಳನ್ನು ಅಲ್ಲಿ ಪೇರಿಸಿಟ್ಟಿದ್ದಾರೆ.

ಒಡಿಶಾದಲ್ಲಿ ಮಾತ್ರ ಆ ಕಾಲದಲ್ಲಿ ಪ್ರಚಲಿತವಿದ್ದ ಲೋಹವಿದ್ಯಾ ಪರಿಣತ ಕೆಲಸಗಾರರು ಅಂತಹ ಕಬ್ಬಿಣದ ಕಂಬಗಳನ್ನು ನಿರ್ಮಿಸಿದ್ದರಂತೆ. ಅಲ್ಲಿಯ ಇನ್ನೊಂದು ಪ್ರಮುಖ ದೇಗುಲವಾದ ಪುರಿ ಜಗನ್ನಾಥ ದೇವಾಲಯದಲ್ಲಿ ಅಂತಹ 239 ಕಬ್ಬಿಣದ ತೊಲೆಗಳನ್ನು ಉಪಯೋಗಿಸಲಾಗಿದೆಯಂತೆ!

**-ಶಶಿಧರ ಹಾಲಾಡಿ, ಬೆಂಗಳೂರು**

# ವೇದಿಕೆಯೇರಿದ ಹಲಸಪ್ಪ

ಕೇರಳ ಹಲಸನ್ನು ರಾಜ್ಯದ ಹಣ್ಣು ಎಂದು ಘೋಷಿಸಿದೆ. ಕೇರಳದ ಕಾಸರಗೋಡಿನ ಪೆರ್ಲದಲ್ಲಿ ನಡೆದ ಹಲಸು ಮೇಳದಲ್ಲಿ ಹಲಸಿಗೆ ವೇದಿಕೆ ಮೇಲೇರಿ ಅತಿಥಿಗಳೊಡನೆ ಕುಳಿತುಕೊಳ್ಳುವ ಭಾಗ್ಯ ಲಭಿಸಿದೆ. ಜೊತೆಗೆ ಪಕ್ಕದಲ್ಲಿಯೇ ಬೆಳಗುತ್ತಿರುವ ದೀಪ. ದೊಡ್ಡ ಹಲಸಿನಲ್ಲಿ ವ್ಯಕ್ತಿಯ ಮುಖವನ್ನು ಬರೆಯಿಸಿ ಮುಂಡಾಸು ಸುತ್ತಿ ವೇದಿಕೆಯಲ್ಲಿ ಅತಿಥಿಗಳ ನಡುವೆ ಕುಳ್ಳಿರಿಸಲಾಗಿತ್ತು. ಈ ಹಲಸಪ್ಪನನ್ನು ನೋಡಿದರೆ ವ್ಯಕ್ತಿಯೋರ್ವನು ನಗುತ್ತಾ ಕುಳಿತಂತೆ ಭಾಸವಾಗುತ್ತಿತ್ತು. ಹಲಸು ಮೇಳದ ರೂವಾರಿ ಶಿಕ್ಷಕ ಉಮೇಶ್ ಪೆರ್ಲರ ಚಮತ್ಕಾರವಿದು.

**-ಶಂಕರನಾರಾಯಣ ಭಟ್ ಎಸ್.,**
**ಅಡ್ಯನಡ್ಕ**

